# ಶ್ರೀರಾಮಕೃಷ್ಣರ ಅದ್ವಿತೀಯತೆ

**ಎಲ್.ಜಿ ನಾಗೇಶ್ ರಾವ್**

ಶ್ರೀರಾಮಕೃಷ್ಣರ ಅಸಾಧಾರಣ ಜೀವನ ಹಾಗೂ ಅಲೌಕಿಕ ವ್ಯಕ್ತಿತ್ವ ಮಾನವ ಇತಿಹಾಸದಲ್ಲೇ ಅತ್ಯಂತ ಅಪರೂಪವಾಗಿ ಜರುಗಿದ ಒಂದು ಮಹತ್ತರ ಘಟನೆ ಎಂದು ಪರಿಗಣಿಸಲಾಗಿದೆ. ಅತ್ಯಂತ ಜನನಿಬಿಡವಾದ ಹಾಗೂ ಆಧುನಿಕ ಬೆಳವಣಿಗೆಗಳ ಕೇಂದ್ರವಾಗಿದ್ದ ಕಲ್ಕತ್ತೆಯ ಒಂದು ದೇಗುಲದಲ್ಲಿ ಸದ್ದಿಲ್ಲದೆ ನಡೆದ ಈ ಮಹಾತ್ಮರ ಧ್ಯಾನ, ತಪಸ್ಸು ಹಾಗೂ ಭಕ್ತಿಭಾವ-ಭರಿತ ಜೀವನ ಕ್ರಮೇಣ ಜಗತ್ತನ್ನೆಲ್ಲ ಪ್ರಭಾವ ಬೀರುವಷ್ಟು ವ್ಯಾಪಕಗೊಂಡಿತು. ಅವತಾರ ತತ್ತ್ವಕ್ಕೆ ಹೊಸ ಭಾಷ್ಯವನ್ನೇ ಬರೆದ ಅವರ ಜೀವನದ ಬಗ್ಗೆ ಬರೆದಿರುವ ಲೇಖಕರು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಸಹಾಯಕ ರಿಜಿಸ್ಟ್ರಾರ್ ಆಗಿ ಸೇವೆ ಸಲ್ಲಿಸಿ, ನಿವೃತ್ತರಾಗಿದ್ದಾರೆ. ಬೆಂಗಳೂರು ಆಶ್ರಮದ ಭಕ್ತರಾದ ಅವರು ಭಾಷಾಂತರವೇ ಮೊದಲಾದ ಹಲವು ಸಾಹಿತ್ಯಿಕ ಚಟುವಟಿಕೆಗಳಲ್ಲಿ ನಿರತರಾಗಿದ್ದಾರೆ.

ಜಗತ್ತಿನಲ್ಲಿ ಕಾಲಕಾಲಕ್ಕೆ ಮಹಾತ್ಮರು ಹುಟ್ಟಿ ಬಂದು ಧರ್ಮ ಸಂಸ್ಥಾಪನೆ ಮಾಡುತ್ತಾ ಬಂದಿದ್ದಾರೆ. 'ಯಾವಾಗ ಧರ್ಮಕ್ಕೆ ಗ್ಲಾನಿ ಯುಂಟಾಗುತ್ತದೆಯೋ ಆಗ ನಾನು ಅವತಾರ ಮಾಡಿ ಧರ್ಮ ವನ್ನು ಪುನರುತ್ಥಾನ ಮಾಡುತ್ತೇನೆ' ಎಂದು ಶ್ರೀಕೃಷ್ಣನು ಭಗವ ದ್ಗೀತೆಯಲ್ಲಿ ಹೇಳಿದ್ದಾನೆ (೪-೭,೮). ಅದರಂತೆಯೇ ಬುದ್ಧ, ಯೇಸುಕ್ರಿಸ್ತ, ಬಸವಣ್ಣ, ಶಂಕರಾಚಾರ್ಯ, ಚೈತನ್ಯ ಮಹಾ ಪ್ರಭು, ಶ್ರೀರಾಮಕೃಷ್ಣರು, ಶ್ರೀರಮಣ ಮಹರ್ಷಿಗಳು ಮೊದ ಲಾದವರು ಬಂದಿದ್ದಾರೆ. ಆಯಾ ಕಾಲದ ಆವಶ್ಯಕತೆಗಳಿಗೆ ಅನು ಸಾರವಾಗಿ ಅವರು ಬೋಧನೆ ಮಾಡಿದ್ದಾರೆ. ಅವರ ಚಿಂತನೆಗಳು, ಬೋಧನೆಗಳು ಅಂದಿನ ಸಮಾಜದ ಆವಶ್ಯಕತೆಗಳಾಗಿದ್ದವು ಎಂಬುದನ್ನು ನಾವು ಮನಗಾಣುತ್ತೇವೆ. ಅಂತಹ ಸುಧಾರಕರು ಇಲ್ಲದಿದ್ದರೆ ಸಮಾಜವು ನಿಂತ ನೀರಾಗುತ್ತದೆ. ಆದರೆ ಸಮಾಜವು ಪರಿವರ್ತನಶೀಲವಾಗಿದ್ದು, ಒಂದು ಕೊಂಬೆಯು ಒಣಗಿದರೆ ಮತ್ತೊಂದು ಕೊಂಬೆ ಚಿಗುರುವ ಅಶ್ವತ್ಥಮರದಂತೆ ಬೆಳೆಯುತ್ತಾ ಇರುತ್ತದೆ.

### ಶ್ರೀರಾಮಕೃಷ್ಣರ ಅವತಾರದ ಸಂಧರ್ಭ

ಹತ್ತೊಂಬತ್ತನೆಯ ಶತಮಾನದಲ್ಲಿ ಬಂಗಾಳದಲ್ಲಿ ಹೊಸ ಹೊಸ ಧಾರ್ಮಿಕ ವಿಚಾರಗಳು ತಲೆಯೆತ್ತಿದವು. ಮೊಘಲರ ಆಕ್ರಮಣವಾಯಿತು. ಬ್ರಿಟಿಷರ ಆಗಮನವಾಯಿತು. ಪಾಶ್ಚಿ ಮಾತ್ಯರ ವಿದ್ಯಾಭ್ಯಾಸ ಮತ್ತು ವಿಚಾರಗಳು ಭಾರತೀಯರ ಮೇಲೆ ಪ್ರಭಾವ ಬೀರಿದವು. ಆರ್ಯಸಮಾಜದ ದಯಾನಂದ ಸರಸ್ವತಿಗಳು ಮೂರ್ತಿಪೂಜೆಯನ್ನು ಖಂಡಿಸಿದರು, ಇಸ್ಲಾಂ ಧರ್ಮದ ಪ್ರಭಾವವೂ ಉಂಟಾಯಿತು. ಬ್ರಹ್ಮ ಸಮಾಜವು ಸ್ಥಾಪನೆಗೊಂಡು, ವಿದ್ಯಾವಂತರನ್ನು ಅದರಲ್ಲಿಯೂ ಯುವಕ ರನ್ನು ಆಕರ್ಷಿಸಿತು. ಮಹರ್ಷಿ ದೇವೇಂದ್ರನಾಥ ಠಾಕೂರ್, ಕೇಶವಚಂದ್ರ ಸೇನ್, ಮತ್ತು ಯುವಕರಾದ ನರೇಂದ್ರನಾಥ ದತ್ತ, ಶರತ್‌ಚಂದ್ರ ಚಕ್ರವರ್ತಿ, ಶಶಿಭೂಷಣ ಚಕ್ರವರ್ತಿ, ರಾಖಾಲ ಚಂದ್ರ ಘೋಷ್ ಮೊದಲಾದ ಬ್ರಹ್ಮಸಮಾಜದ ಸದ ಸ್ಯರು ಶ್ರೀರಾಮಕೃಷ್ಣರ ಸಂಪರ್ಕಕ್ಕೆ ಬಂದರು. ಆಂಗ್ಲ ವಿದ್ಯಾ ಭ್ಯಾಸದಿಂದ ಪ್ರೇರಿತರಾದ ಇವರು ಸನಾತನ ಋಷಿಗಳಲ್ಲಿ ಮತ್ತು ತತ್ತ್ವಶಾಸ್ತ್ರದಲ್ಲಿ ಶ್ರದ್ಧೆಯನ್ನು ಹೊಂದಿಲ್ಲವೆಂಬುದನ್ನು ಶ್ರೀರಾಮ ಕೃಷ್ಣರು ಅರಿತರು. ಆ ಯುವಕರಿಗೆ ಪಾಶ್ಚಾತ್ಯ ತತ್ತ್ವಜ್ಞಾನಿಗಳ ಭಾವನೆಗಳ ಕಡೆಗೆ ಹೆಚ್ಚು ಒಲವು ಇತ್ತೆಂಬುದೂ ತಿಳಿಯಿತು. ಇದರಿಂದ ಶ್ರೀರಾಮಕೃಷ್ಣರು ಧೃತಿಗೆಡಲಿಲ್ಲ. ಕೇಶವ ಚಂದ್ರಸೇನ ಮತ್ತು ಅವನ ಅನುಯಾಯಿಗಳ ಜೊತೆ ಶ್ರೀರಾಮಕೃಷ್ಣರ ಒಡ ನಾಟ ಉಂಟಾಯಿತು. ಶ್ರೀರಾಮಕೃಷ್ಣರು ಬ್ರಹ್ಮಸಮಾಜಕ್ಕೆ ಪರಿವರ್ತಿತರಾಗುತ್ತಿದ್ದರೆಂದು ಅವರು ತಿಳಿದಿದ್ದರು. ಆದರೆ ಶ್ರೀರಾಮಕೃಷ್ಣರ ವಿಶ್ವಮಾನವತೆ, ವಿಶ್ವಭ್ರಾತೃತ್ವ ಮತ್ತು ಸನಾತನ ಧರ್ಮದ ಶ್ರದ್ಧೆಗಳು ಬ್ರಹ್ಮ ಸಮಾಜದ ಸದಸ್ಯರನ್ನು ಸಂಪೂರ್ಣ ವಾಗಿ ಬದಲಾಯಿಸಿದವು. ಕೇಶವಚಂದ್ರಸೇನ, ನರೇಂದ್ರ, ರಾಖಾಲ, ಶಶಿ ಮೊದಲಾದವರು ಶ್ರೀರಾಮಕೃಷ್ಣರ ಶಿಷ್ಯರಾದರು. ಮೂರ್ತಿಪೂಜೆಯನ್ನು ಖಂಡಿಸುತ್ತಿದ್ದವರು ಮೂರ್ತಿಪೂಜೆ ಯನ್ನು ಒಪ್ಪಿಕೊಳ್ಳಬೇಕಾಯಿತು. ಭಾವಮುಖದಲ್ಲಿ ನೆಲೆನಿಂತಿದ್ದ ದೇವಮಾನವರಾದ ಶ್ರೀರಾಮಕೃಷ್ಣರು ಸನಾತನ ಧರ್ಮಕ್ಕೆ ಕಾಯ ಕಲ್ಪ ಮಾಡಿದರು. ಅವರ ಅದ್ವಿತೀಯತೆ ಮತ್ತು ವಿಶಿಷ್ಟತೆಗಳನ್ನು ತಿಳಿಯೋಣ.

ಸತ್ಯದರ್ಶನವನ್ನು ಮಾಡಿಕೊಂಡವರೂ, ಜ್ಞಾನಿಗಳೂ ಆದ ಸಂತರು ಒಂದೇ ರೀತಿಯ ಜೀವನ ಕ್ರಮವನ್ನು ಅನುಸರಿಸು ವುದಿಲ್ಲ. ಅವರು ಒಬ್ಬೊಬ್ಬರು ಒಂದೊಂದು ರೀತಿ ಇರುತ್ತಾರೆ. ಉದಾಹರಣೆಗೆ ಶ್ರೀರಮಣ ಮಹರ್ಷಿಗಳು ಅರುಣಾಚಲವನ್ನು ಬಿಟ್ಟು (ತಿರುವಣ್ಣಾಮಲೈ) ಬೇರೆ ಎಲ್ಲೂ ಹೋಗಲಿಲ್ಲ. ಸದಾಶಿವ ಬ್ರಹ್ಮೇಂದ್ರರು ಅನೇಕ ವರ್ಷಗಳ ಕಾಲ ಮೌನವಾಗಿದ್ದರು.

### ಗುರುಗಳ ಆಗಮನ

ಶ್ರೀರಾಮಕೃಷ್ಣರು ಗುರುಗಳನ್ನು ಹುಡುಕಿಕೊಂಡು ಹೋಗ ಲಿಲ್ಲ. ಗುರುಗಳೇ ಅವರ ಹತ್ತಿರ ಬಂದರು. ಭೈರವಿ ಬ್ರಾಹ್ಮಣಿ ಮತ್ತು ತೋತಾಪುರಿ — ಇವರೇ ಆ ಗುರುಗಳು.

ಒಂದು ದಿನ ಭೈರವಿ ಬ್ರಾಹ್ಮಣಿ ದೋಣಿಯಲ್ಲಿ ದಕ್ಷಿಣೇಶ್ವರಕ್ಕೆ ಬಂದಳು. ಆಕೆಯನ್ನು ತಮ್ಮ ಹತ್ತಿರ ಕರೆದುಕೊಂಡು ಬರ

ಬೇಕೆಂದು ಶ್ರೀರಾಮಕೃಷ್ಣರು ಹೃದಯರಾಮನಿಗೆ ತಿಳಿಸಿದರು. ಭೈರವಿ ಬ್ರಾಹ್ಮಣಿ ಬಂದು ಹೇಳಿದಳು: ''ಇಷ್ಟು ದಿನ ಎಲ್ಲಿದ್ದೆ ಮಗು? ನಾನು ನಿನಗಾಗಿ ಹುಡುಕುತಿದ್ದೆ..'' ಆಕೆ ತಂತ್ರ ವಿದ್ಯೆಯಲ್ಲಿ ಪರಿಣಿತಿ ಉಳ್ಳವಳು. ಶ್ರೀರಾಮಕೃಷ್ಣರು ಆಕೆಯಿಂದ ತಂತ್ರಸಾಧನೆಯನ್ನು ಕಲಿತರು. ಆಶ್ಚರ್ಯದ ಸಂಗತಿಯೆಂದರೆ ಅವರು ಎಲ್ಲ ತಾಂತ್ರಿಕ ಸಾಧನೆಗಳನ್ನೂ ಅತ್ಯಂತ ಕಡಿಮೆ ಕಾಲದಲ್ಲಿ ಮಾಡಿ ಮುಗಿಸಿದರು. ಕಠಿಣವಾದ ತಾಂತ್ರಿಕ ಸಾಧನೆಗಳಲ್ಲಿ ಸಾಧಾರಣ ಸಾಧಕನು ಪತಿತನಾಗುವ ಸಾಧ್ಯತೆಗಳುಂಟು. ಆದರೆ ಶ್ರೀರಾಮಕೃಷ್ಣರು ಎಲ್ಲಾ ಕಠಿಣ ಪರೀಕ್ಷೆಗಳಲ್ಲೂ ಉತ್ತೀರ್ಣರಾದರು.

ತೋತಾಪುರಿ ಎಂಬ ಅದ್ವೈತ ಸಾಧಕ ಗುರುವು ಗಂಗಾಸಾಗರ ಯಾತ್ರೆ ಮಾಡಿಕೊಂಡು ದಕ್ಷಿಣೇಶ್ವರಕ್ಕೆ ಆಕಸ್ಮಿಕವಾಗಿ ಬಂದನು. ಶ್ರೀರಾಮಕೃಷ್ಣರನ್ನು ಕಂಡ ತಕ್ಷಣ ಅವರು ಉತ್ತಮ ಅಧಿಕಾರಿಯೆಂದು ತೋತಾಪುರಿಗೆ ತಿಳಿಯಿತು. ದಿವ್ಯಮಾತೆ ಭವತಾರಿಣಿಯ ಆದೇಶವನ್ನು ಪಡೆದು ಶ್ರೀರಾಮಕೃಷ್ಣರು ಅದ್ವೈತ ಸಾಧನೆಗೆ ತೊಡಗಿದರು. ಶ್ರೀರಾಮಕೃಷ್ಣರು ಮೊದಲ ದಿನವೇ ನಿರ್ವಿಕಲ್ಪ ಸಮಾಧಿಯನ್ನು ಹೊಂದಿದರು. ಮೂರು ದಿವಸಗಳ ಕಾಲ ಆ ಸ್ಥಿತಿಯಲ್ಲಿಯೇ ಇದ್ದರು. ತೋತಾಪುರಿಯ ೪೦ ವರ್ಷಗಳ ಕಠಿಣ ಸಾಧನೆಯಿಂದ ಪಡೆದುಕೊಂಡದ್ದನ್ನು ಶ್ರೀರಾಮಕೃಷ್ಣರು ಅತ್ಯಲ್ಪ ಕಾಲದಲ್ಲಿಯೇ ಸಾಕ್ಷಾತ್ಕಾರ ಮಾಡಿಕೊಂಡಿದ್ದರು. ತೋತಾಪುರಿಗೆ ಇದರಿಂದ ಆಶ್ಚರ್ಯವೂ ಸಂತೋಷವೂ ಉಂಟಾಯಿತು. ಮುಂದೆ ತೋತಾಪುರಿಯು ಸುಮಾರು ೧೧ ತಿಂಗಳ ಕಾಲ ದಕ್ಷಿಣೇಶ್ವರದಲ್ಲಿಯೇ ಇದ್ದು ಅದ್ವೈತ ಸಾಧನೆಯಲ್ಲಿ ಸಹಾಯ ಮಾಡಿದನು.

## ದಿವ್ಯ ದಂಪತಿಗಳು

ಶ್ರೀರಾಮಕೃಷ್ಣರು ಮತ್ತು ಶಾರದಾದೇವಿಯವರು ಅತ್ಯಂತ ಅಪರೂಪದ ದಿವ್ಯದಂಪತಿಗಳು. ಅವರು ಎಂದೂ ದೈಹಿಕ ಆಕರ್ಷಣೆಯನ್ನು ಹೊಂದಲಿಲ್ಲ. ಶ್ರೀರಾಮಕೃಷ್ಣರು ತಮ್ಮ ಹೆಂಡತಿಯನ್ನು ಜಗನ್ಮಾತೆ ಕಾಳಿಯೆಂದೇ ತಿಳಿದಿದ್ದರು. ಒಂದು ದಿನ ಶ್ರೀಶಾರದಾದೇವಿಯವರು ಶ್ರೀರಾಮಕೃಷ್ಣರ ಕಾಲುಗಳನ್ನು ಒತ್ತುತ್ತಾ ಇದ್ದಾಗ ಅವರು ಶ್ರೀರಾಮಕೃಷ್ಣರನ್ನು ಕೇಳಿದರು, ''ನೀವು ನನ್ನನ್ನು ಯಾವ ಭಾವದಿಂದ ನೋಡುತ್ತೀರಿ?'' ತಕ್ಷಣ ಶ್ರೀರಾಮಕೃಷ್ಣರು ಹೇಳಿದರು: ''ಮಂದಿರದೊಳಗಿರುವ ಜಗನ್ಮಾತೆಯಂತೆಯೇ ಕಾಣುತ್ತೇನೆ'' ಇದು ಅಸಾಧಾರಣವಾದ, ಅದ್ವಿತೀಯವಾದ ವಿಚಾರ, ಸಾಮಾನ್ಯ ಜನರ ಬುದ್ಧಿಗೆ ಇದು ಅರ್ಥವಾಗುವುದೇ ಕಷ್ಟ.

## ಷೋಡಶಿ ಪೂಜೆ

ಜಗತ್ತಿನ ಸಂತರ ಇತಿಹಾಸಲ್ಲಿಯೇ ಆಶ್ಚರ್ಯಕರವಾದ ವಿಶಿಷ್ಟ ಸಂಗತಿ ಇದು. ಅಂದು ದುರ್ಗಾಮಾತೆಯ ವಿಶೇಷ ಪೂಜೆಯ ದಿವಸ. ಶ್ರೀರಾಮಕೃಷ್ಣರು ತಮ್ಮ ಕೊಠಡಿಯಲ್ಲಿಯೇ ಪೂಜೆ ಮಾಡುವುದಾಗಿ ತಿಳಿಸಿದ್ದರು. ಅದಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡಲಾಗಿತ್ತು. ಶ್ರೀಶಾರದಾದೇವಿಯವರಿಗೆ ಅಲ್ಲಿಗೆ ಬರಲು ಮೊದಲೇ ತಿಳಿಸಲಾಗಿತ್ತು. ಶಾರದಾದೇವಿಯವರು ಒಂದು ದುರ್ಗಾಮಾತೆಗಾಗಿ ಇರಿಸಿದ್ದ ಪೀಠದ ಮೇಲೆ ಕುಳಿತುಕೊಂಡರು. ಸ್ವಲ್ಪ ಹೊತ್ತಿನ ನಂತರ ಅವರು ಧ್ಯಾನಸ್ಥರಾದರು ಮತ್ತು ಸಮಾಧಿಯನ್ನು ಹೊಂದಿದರು. ಶ್ರೀರಾಮಕೃಷ್ಣರು ಶಾಸ್ತ್ರೋಕ್ತ ರೀತಿಯಲ್ಲಿ ದೇವಸ್ಥಾನದಲ್ಲಿ ದೇವಿಗೆ ಪೂಜೆ ಮಾಡುವ ರೀತಿಯಲ್ಲಿಯೇ ಪೂಜೆ ಮಾಡಿದರು. ಇದಕ್ಕೆ ಷೋಡಶೀಪೂಜೆ ಎಂದೂ ತ್ರಿಪುರಸುಂದರಿ ಪೂಜೆ ಎಂದೂ ಹೆಸರು. ಅನಂತರ ಶ್ರೀರಾಮಕೃಷ್ಣರು ಸಮಾಧಿಸ್ಥರಾದರು. ರಾತ್ರಿಯೆಲ್ಲಾ ಹೀಗೆಯೇ ಕಳೆಯಿತು. ಬೆಳಗಿನ ಜಾವದಲ್ಲಿ ಶ್ರೀರಾಮಕೃಷ್ಣರು ತಮ್ಮ ಸಾಧನೆಯ ಫಲವನ್ನೂ ಮತ್ತ ಅದರ ಸಂಕೇತವಾಗಿ ಜಪಮಾಲೆಯನ್ನೂ ಶ್ರೀಶಾರದಾದೇವಿಯವರಿಗೆ ಅರ್ಪಿಸಿದರು. ಇಲ್ಲಿಗೆ ಶ್ರೀರಾಮಕೃಷ್ಣರ ಸಾಧನೆಯ ಒಂದು ಘಟ್ಟ ಮುಗಿಯಿತು.

## ಶಿಷ್ಯರನ್ನು ತಯಾರು ಮಾಡಿದ್ದು

ಶ್ರೀರಾಮಕೃಷ್ಣರು ಎಲ್ಲ ಧರ್ಮಗಳ ಅನುಯಾಯಿಗಳಲ್ಲಿ ಅವರವರ ಧರ್ಮದಲ್ಲಿ ಶ್ರದ್ಧೆ, ಭಕ್ತಿಗಳನ್ನು ಹೆಚ್ಚುವಂತೆ ಮಾಡಿದರು. ಅವರು ಯಾವುದೇ ಹೊಸ ಧರ್ಮವನ್ನು, ಮತವನ್ನು ಸ್ಥಾಪನೆ ಮಾಡಲಿಲ್ಲ. ಪ್ರತಿಯೊಂದು ಧರ್ಮವೂ ದೇವರಡಿಗೆ ನಡೆಯುವ ದಾರಿ ಎಂಬುದನ್ನು ಪ್ರಾಯೋಗಿಕವಾಗಿ ಆಚರಿಸಿ ತೋರಿಸಿದರು. ಸರ್ವಧರ್ಮ ಸಹಿಷ್ಣುತೆಯ, ಸರ್ವಧರ್ಮ ಸಮನ್ವಯದ ಪ್ರಚಾರಕ್ಕೆ ಒಂದು ಶ್ರದ್ಧಾವಂತ ಶಿಷ್ಯವೃಂದವನ್ನು ತಯಾರು ಮಾಡಿದರು. ಶ್ರೀರಾಮಕೃಷ್ಣರು ಯಾವ ಪುಸ್ತಕವನ್ನೂ ಬರೆಯಲಿಲ್ಲ ; ಯಾವ ವೇದಿಕೆಯ ಮೇಲೂ ಉಪನ್ಯಾಸ ಮಾಡಲಿಲ್ಲ.

ಶ್ರೀರಾಮಕೃಷ್ಣರ ಮಹಾಸಮಾಧಿಯ (೧೮೮೬) ಹಿಂದಿನ ೩-೪ ವರ್ಷಗಳಲ್ಲಿ ಅವರ ಶಿಷ್ಯರ ಆಗಮನ ಪ್ರಾರಂಭವಾಯಿತು. ಮಾಸ್ಟರ್ ಮಹಾಶಯ, ನರೇಂದ್ರ, ಶಶಿ, ರಾಖಾಲ, ಶರತ್ ಮೊದಲಾದವರು ಬಂದು ಸೇರಿದರು. ಗೃಹಸ್ಥ ಭಕ್ತರೂ ಬಂದರು. ಶ್ರೀರಾಮಕೃಷ್ಣರ ಸಂದೇಶಗಳನ್ನು ಸಾಮಾನ್ಯ ಜನರಲ್ಲಿಗೆ ಕೊಂಡೊಯ್ದರು. ಅವರ ಪವಿತ್ರ ಜೀವನಾದರ್ಶಗಳಿಂದ, ಬೋಧನೆಗಳಿಂದ ಇದು ಇಂದಿಗೂ ಪರಂಪರಾಗತವಾಗಿ ಪ್ರಚಾರವಾಗುತ್ತಿದೆ. ಶ್ರೀರಾಮಕೃಷ್ಣರ ಮುಖ್ಯ ಶಿಷ್ಯರೆಂದರೆ ಅವರ ಸಹಧರ್ಮಿಣಿ ಶ್ರೀಶಾರದಾದೇವಿಯವರೇ ಆಗಿದ್ದರು. ಅವರ ಸಂನ್ಯಾಸಿ ಶಿಷ್ಯರು ಜ್ಞಾನ, ಭಕ್ತಿ, ವೈರಾಗ್ಯ ಸೇವೆಗಳಲ್ಲಿ ಒಬ್ಬರಿಗಿಂತ ಒಬ್ಬರು ಮಿಗಿಲಾಗಿದ್ದರು. ಅವರಲ್ಲಿ ಯಾರು ಹೆಚ್ಚು ಯಾರು ಕಡಿಮೆ ಎಂದು ಹೇಳಲು ಬರುವುದಿಲ್ಲ. ಶ್ರೀರಾಮಕೃಷ್ಣರ ಕೆಲಸವನ್ನು ಅವರು ಮುಂದುವರಿಸಿದರು. ಅವರ ಪುಣ್ಯನಾಮಗಳನ್ನು ಇಲ್ಲಿ ಭಕ್ತಿಯಿಂದ ಸ್ಮರಿಸಲಾಗಿದೆ. ಸ್ವಾಮಿ ಚೇತನಾನಂದರು ಅವರ ಜೀವನ, ಸಾಧನೆಗಳನ್ನು '**ದೇವರೊಡನೆ ಬಾಳಿದವರು**' (ಭಾಗ-೧) ಗ್ರಂಥ

ದಲ್ಲಿ ವಿವರಿಸಿದ್ದಾರೆ: ೧. ಸ್ವಾಮಿ ವಿವೇಕಾನಂದ ೨. ಸ್ವಾಮಿ ಬ್ರಹ್ಮಾನಂದ ೩. ಸ್ವಾಮಿ ಶಿವಾನಂದ ೪. ಸ್ವಾಮಿ ಪ್ರೇಮಾನಂದ ೫. ಸ್ವಾಮಿ ಯೋಗಾನಂದ ೬. ಸ್ವಾಮಿ ನಿರಂಜನಾನಂದ ೭. ಸ್ವಾಮಿ ರಾಮಕೃಷ್ಣಾನಂದ ೮. ಸ್ವಾಮಿ ಶಾರದಾನಂದ ೯. ಸ್ವಾಮಿ ತುರೀಯಾನಂದ ೧೦. ಸ್ವಾಮಿ ಅದ್ಭುತಾನಂದ ೧೧. ಸ್ವಾಮಿ ಅಭೇದಾನಂದ ೧೨. ಸ್ವಾಮಿ ತ್ರಿಗುಣಾತೀತಾನಂದ ೧೩. ಸ್ವಾಮಿ ಅದ್ವೈತಾನಂದ ೧೪. ಸ್ವಾಮಿ ಸುಬೋಧಾನಂದ ೧೫. ಸ್ವಾಮಿ ಅಖಂಡಾನಂದ ೧೬. ಸ್ವಾಮಿ ವಿಜ್ಞಾನಾನಂದ

ಸ್ವಾಮಿ ಚೇತನಾನಂದರು **'ದೇವರೊಡನೆ ಬಾಳಿದವರು'** – ಭಾಗ ೨ ರಲ್ಲಿ ೩೧ ಜನ ಗೃಹಸ್ಥಭಕ್ತರ ಪರಿಚಯವನ್ನು ಮಾಡಿ ಕೊಟ್ಟಿದ್ದಾರೆ.

### ಕಲ್ಪತರು ದಿವಸ

ಜನವರಿ ೧ ನೆಯ ತಾರೀಖು ೧೮೮೬ ರಂದು ಒಂದು ವಿಶಿಷ್ಟ ವಾದ ಘಟನೆ ನಡೆಯಿತು. ಅದು ಸಂತರ ಇತಿಹಾಸದಲ್ಲಿಯೇ ಅಪೂರ್ವವಾದದ್ದು. ಆಗ ಶ್ರೀರಾಮಕೃಷ್ಣರು ಕಾಶೀಪುರದ ತೋಟದ ಮನೆಯಲ್ಲಿ ಗಂಟಲು ನೋವಿಗೆ ಚಿಕಿತ್ಸೆ ಪಡೆಯುತ್ತಿದ್ದರು. ಅಂದು ಮಧ್ಯಾಹ್ನ ೩ ಗಂಟೆಯ ಸಮಯ. ಅವರಿಗೆ ಏನೋ ಒಂದು ರೀತಿಯ ಉತ್ಸಾಹ ಬಂದು ಮಹಡಿಯಿಂದ ಕೆಳಗೆ ಇಳಿದು ಬಂದರು. ಕೆಳಗೆ ಹಜಾರದಲ್ಲಿದ್ದ ಜನರು ಅವರಿಗೆ ಪ್ರಣಾಮ ಮಾಡಿದರು. ಕೆಲವರು ಅಲ್ಲಲ್ಲಿ ಮರಗಳ ಕೆಳಗೆ ಕುಳಿತಿದ್ದರು. ಪರಮಹಂಸರು ಅಲ್ಲಿದ್ದ ಪ್ರತಿಯೊಬ್ಬರ ತಲೆಯ ಮೇಲೂ ತಮ್ಮ ಕೃಪಾಹಸ್ತವನ್ನಿಟ್ಟು ''ಚೈತನ್ಯವಂತರಾಗಿ'' ('be illumined') ಎಂದು ಆಶೀರ್ವದಿಸಿದರು. ಆ ದಿವ್ಯ ಸ್ಪರ್ಶದಿಂದ ಪ್ರತಿಯೊಬ್ಬರೂ ಆನಂದಪರವಶರಾದರು. ಕೆಲವರು ಧ್ಯಾನಸ್ಥರಾದರು. ಕೆಲವರು ಕುಣಿದಾಡಿದರು. ಅಂದು ಅಲ್ಲಿದ್ದ ಭಕ್ತರೇ ಭಾಗ್ಯವಂತರು. ಅವರೆಲ್ಲರೂ ಪುನೀತರಾದರು. ಪ್ರತಿ ವರ್ಷ ಜನವರಿ ೧ನೆಯ ತಾರೀಖು ಎಲ್ಲಾ ರಾಮಕೃಷ್ಣ ಆಶ್ರಮಗಳಲ್ಲಿಯೂ ಕಲ್ಪತರು ದಿವಸವನ್ನು ಆಚರಿಸಲಾಗುತ್ತದೆ. ಇಂದು ಶ್ರೀರಾಮಕೃಷ್ಣರ ಅವ್ಯಾಜ ಕರುಣೆಯನ್ನು ತೋರಿಸುತ್ತದೆ.

### ಭಾವಮುಖದಲ್ಲಿ ಇದ್ದರು

ಶ್ರೀರಾಮಕೃಷ್ಣರ ಅದ್ವಿತೀಯತೆಯೆಂದರೆ ಅವರು ಭಗವತ್ ಸಾಕ್ಷಾತ್ಕಾರವಾದ ನಂತರ ನಿರ್ವಿಕಲ್ಪ ಸಮಾಧಿಯನ್ನು ಅನುಭವಿಸಿ ಅನಂತರ ಭಾವಮುಖದಲ್ಲಿ ಇದ್ದರು. ಭಾವಮುಖ ಎಂದರೇನು ಎಂಬುದನ್ನು ನಾವು ತಿಳಿದುಕೊಳ್ಳಬೇಕು. ಇದರ ಅರ್ಥವನ್ನು ಸ್ವಾಮಿ ಶಾರದಾನಂದರು ಬರೆದಿರುವ ಮೇರು ಕೃತಿ **'ಶ್ರೀರಾಮಕೃಷ್ಣಲೀಲಾಪ್ರಸಂಗ'** *(ಭಾಗ ೧, ಪುಟ ೪೩೫)* ದಲ್ಲಿ ಈ ರೀತಿ ವಿವರಿಸಿದ್ದಾರೆ: ''ಶ್ರೀ ಜಗನ್ಮಾತೆಯ ನಿರ್ಗುಣ ಸಗುಣಗಳಿಂದ ಕೂಡಿದ ಸ್ವರೂಪವನ್ನು ಪೂರ್ಣ ಅನುಭವಿಸಿದ ಮೇಲೆ ಶ್ರೀರಾಮಕೃಷ್ಣರು 'ಭಾವಮುಖದಲ್ಲಿರು''ಎಂಬ ಆದೇಶವನ್ನು ಜಗನ್ಮಾತೆಯಿಂದ ಪಡೆದರು. ಅಂದರೆ ಅಹಂಭಾವವನ್ನು ಸಂಪೂರ್ಣ ಲಯಗೊಳಿಸಿ ನಿರ್ಗುಣ ಭಾವದಲ್ಲಿ ಇರಬೇಡ. ಯಾವುದರಿಂದ ಅನಂತ ವಿಶ್ವಭಾವಗಳು ಉಂಟಾಗುತ್ತಿವೆಯೋ ಆ ವಿಶ್ವ ಅಹಂ ನೀನಾಗಿರುವೆ. ಅದರ ಇಚ್ಛೆಯೇ ನಿನ್ನ ಇಚ್ಛೆ, ಅದರ ಕಾರ್ಯವೇ ನಿನ್ನ ಕಾರ್ಯ. ಈ ಭಾವವನ್ನು ಯಾವಾಗಲೂ ಸರಿಯಾದ ರೀತಿಯಲ್ಲಿ ಅನುಭವಿಸುತ್ತಾ ಜೀವನ ಯಾಪನೆ ಮಾಡು. ಮತ್ತು ಲೋಕಕಲ್ಯಾಣವನ್ನು ಸಾಧಿಸು — ಎಂದು. ಅದರಿಂದ ಭಾವಮುಖದಲ್ಲಿರುವುದು ಎಂದರೆ ಎಲ್ಲ ಸಮಯದಲ್ಲಿಯೂ, ಎಲ್ಲ ಅವಸ್ಥೆಗಳಲ್ಲಿಯೂ ನಾನು ಅದೇ ವಿಶ್ವ ಅಹಂ, ಅದೇ ಪಕ್ವ ಅಹಂ ಎಂಬ ಅರಿವನ್ನು ಮನಸ್ಸಿನಲ್ಲಿ ಇಟ್ಟುಕೊಂಡಿರುವುದು.''

ಭಾವಮುಖದಲ್ಲಿ ನೆಲೆನಿಂತಿರುವ ಜ್ಞಾನಿಯು ತನ್ನ ದೃಷ್ಟಿಯಿಂದ, ಸ್ಪರ್ಶದಿಂದ, ಹಾಗೂ ಸಂಕಲ್ಪ ಮಾತ್ರದಿಂದಲೇ ಶಿಷ್ಯರಲ್ಲಿ ಅಧ್ಯಾತ್ಮ ಜಾಗೃತಿಯನ್ನು ಉಂಟುಮಾಡಬಲ್ಲನು. ಅದನ್ನು ಶ್ರೀರಾಮಕೃಷ್ಣರು ಮಾಡಿ ತೋರಿಸಿದ್ದಾರೆ. ಆ ದಿವ್ಯ ಭಾವದಲ್ಲಿದ್ದು ಲೋಕಸಂಗ್ರಹಕ್ಕಾಗಿ ಕೆಲಸ ಮಾಡಿದ ಸಂತರನ್ನು ನಾವು ಕಾಣುವುದು ಅಪರೂಪ. ಹೀಗೆ ಮಾಡಿದ್ದು ಶ್ರೀರಾಮಕೃಷ್ಣರ ಅದ್ವಿತೀಯತೆ.

### ಸರ್ವಧರ್ಮಸಮನ್ವಯ

ಶ್ರೀರಾಮಕೃಷ್ಣರು ಎಲ್ಲ ಧರ್ಮಗಳ ಸಾಧನಾ ವಿಧಾನಗಳನ್ನು ಅನುಸರಿಸಿ, ಆಚರಿಸಿ, ಸಾಕ್ಷಾತ್ಕಾರವನ್ನು ಪಡೆದುಕೊಂಡರು. ಅನಂತರ ಅವರು ಹೇಳಿದರು: ''ಎಲ್ಲ ಧರ್ಮಗಳೂ ಸತ್ಯದೆಡೆಗೆ ಹೋಗುವ ಮಾರ್ಗಗಳು. ಅವೆಲ್ಲವೂ ಸತ್ಯ. ಆದರೆ ತನ್ನ ಧರ್ಮವೇ ಶ್ರೇಷ್ಠವೆಂದು ಹೇಳಲಾಗದು. ಯಾವುದಾದರೂ ಒಂದು ಧರ್ಮವೇ ಶ್ರೇಷ್ಠವೆಂದು ಹೇಳಲಾಗದು.'' ಎಂದು ಶ್ರೀರಾಮಕೃಷ್ಣರು ತಿಳಿಸಿದರು.

ಶ್ರೀರಾಮಕೃಷ್ಣರು ಅದ್ವೈತ, ದ್ವೈತ ಮತ್ತು ವಿಶಿಷ್ಟಾದ್ವೈತ ಮತಗಳ ಸಮನ್ವಯವನ್ನು ತಿಳಿಸಿದ್ದಾರೆ. ಅವು ಪರಸ್ಪರ ವಿರೋಧಿಗಳಲ್ಲ , ಪರಸ್ಪರ ಪೂರಕಗಳು. ಇದರಿಂದ ಎಷ್ಟೋ ಸಾಧಕರ ಮನಸ್ಸಿನ ಗೊಂದಲ ನಿವಾರಣೆಯಾಯಿತು.

ಕರ್ಮಯೋಗ, ಭಕ್ತಿಯೋಗ, ಜ್ಞಾನಯೋಗ, ಮತ್ತು ರಾಜಯೋಗ ಇವುಗಳ ಸಮನ್ವಯವನ್ನೂ ಶ್ರೀರಾಮಕೃಷ್ಣರು ತಿಳಿಸಿದರು. ಈ ಮಾರ್ಗಗಳು ಒಂದಕ್ಕೊಂದು ಪೂರಕಗಳಾಗಿವೆ ಎಂದು ತಿಳಿಯಬೇಕು.

ಇಂತಹ ವಿಶಿಷ್ಟ ಲಕ್ಷಣಗಳನ್ನು ಹೊಂದಿದ್ದ ಶ್ರೀರಾಮಕೃಷ್ಣರ ಕೃಪೆ ಸದಾ ನಮ್ಮ ಮೇಲಿರಲಿ. ಅವರ ಜೀವನ ಮತ್ತು ಉಪದೇಶಗಳು ಎಲ್ಲ ಕಾಲಕ್ಕೂ ಎಲ್ಲರಿಗೂ ಸ್ಫೂರ್ತಿ ನೀಡಲಿ.